# ಒಡೆಯ ಮತ್ತು ಸೇವಕ ನೈತಿಕತೆ

ಸ್ನೇಹಿತನೊಬ್ಬ ತನ್ನ ಚಾಲಕನ ನಡವಳಿಕೆ ಕುರಿತು ಹೇಳತೊಡಗಿದ. ಹಿಂದಿನ ದಿನ ಅವನ ಕಾರಣದಿಂದ ಮಧ್ಯಾಹ್ನದ ಊಟ ತಡವಾಗಿತ್ತು. ಸಂಜೆ ಮನೆಗೆ ಹಿಂದಿರುಗುವಾಗ ಮಾಲ್ ಬಳಿ ಕಾರು ನಿಲ್ಲಿಸಿ ಇಳಿಯುತ್ತಿದ್ದಾಗಲೇ 'ಬರೋದು ಎಷ್ಟು ಹೊತ್ತಾಗಬಹುದು ಸಾರ್' ಎಂದ. ಇವನಿಗೆ ತಲೆ ಸಿಡಿದಂತಾಯಿತು. ಇದೇನು ಚಾಲಕನ ಇಷ್ಟಕ್ಕೆ ತಕ್ಕಹಾಗೆ ನನ್ನ ದೈನಂದಿನ ನಡೆಯನ್ನು ತಿದ್ದಿಕೊಳ್ಳಬೇಕಾಯಿತಲ್ಲ ಎಂದು ಚಿಂತೆಗೀಡಾದ. ಆಗ ನನಗೆ ತಕ್ಷಣ ನೆನಪಾದದ್ದು ನೀಷೆ ಹೇಳುವ ಒಡೆಯ ನೈತಿಕತೆ ಮತ್ತು ಸೇವಕ ನೈತಿಕತೆ (**Master morality and Servant morality**).

ಫ್ರೆಡ್ರಿಕ್ ನೀಷೆ 20ನೇ ಶತಮಾನದ ಬಹು ದೊಡ್ಡ ಜರ್ಮನ್ ತತ್ವಜ್ಞಾನಿ. ನಾಸ್ತಿಕವಾದಿಯಾಗಿದ್ದ ಅವನು ತನ್ನ ಸಮಕಾಲೀನ ಬ್ರಿಟಿಷ್ ತಾತ್ವಿಕರು ನಂಬಿದ್ದ ಸಂಪ್ರದಾಯಸ್ಥ ನಂಬುಗೆಯನ್ನು ಟೀಕಿಸುತ್ತಿದ್ದ. ಒಳ್ಳೆಯದೆಲ್ಲವೂ ಉಪಕಾರಿಯಾದದ್ದು ಮತ್ತು ಕೆಟ್ಟದ್ದೆಲ್ಲವೂ ಕೆಡುಕು ತರುವಂಥದ್ದು ಎಂಬ ಸರಳ ದೃಷ್ಟಿಕೋನವು ಮೌಲ್ಯವನ್ನು ಕಡೆಗಣಿಸುತ್ತದೆಂಬುದು ಅವನ ವಾದ. ಉಪಕಾರಿಯಾದದ್ದು ಯಾವಾಗಲೂ ಒಳ್ಳೆಯದೆಂದು ವ್ಯಾಖ್ಯಾನಿಸಬಹುದಾದರೆ ಉಪಕಾರಿತನ ಒಂದು ಮೌಲ್ಯ. ಅದು ಮೌಲ್ಯವಾಗುವುದು ವ್ಯಕ್ತಿಯ ಅಭ್ಯಾಸಗಳೊಂದಿಗೆ ಹೊಂದಿಕೊಂಡಾಗ ಮಾತ್ರ. ಒಬ್ಬನಿಗೆ ಒಳ್ಳೆಯದೆನ್ನುವುದು ಇನ್ನೊಬ್ಬನಿಗೂ ಒಳ್ಳೆಯದೆ ಎಂಬುದೇನೂ ಖಾತ್ರಿಯಿಲ್ಲ. ಒಂದು ಕ್ರಿಯೆಯಲ್ಲಿ ಮೌಲ್ಯ ಅಥವಾ ಅಪಮೌಲ್ಯ ಉತ್ಪನ್ನವಾಗುವುದು ಅದರಿಂದ ಉಂಟಾಗುವ ಪರಿಣಾಮದಿಂದ.

ಒಡೆಯ ನೈತಿಕತೆ ಎಂದರೆ ಶ್ರೇಷ್ಠತೆಯ ಭಾವ, ತೆರೆದ ಮನಸ್ಸು, ಧೈರ್ಯ, ಸತ್ಯವಂತಿಕೆ ಇತ್ಯಾದಿ. ಅವು ಇರುವುದು ಶ್ರೇಷ್ಠರಲ್ಲಿ, ಶಕ್ತಿಶಾಲಿಗಳಲ್ಲಿ ಮಾತ್ರ. ಸೇವಕ ನೈತಿಕತೆ ಎಂದರೆ ದೈನ್ಯತೆ, ವಿನಯ, ಅನುಕಂಪ; ಇವು ದುರ್ಬಲರಲ್ಲಿ, ಹೇಡಿಗಳಲ್ಲಿ, ಸಣ್ಣವರಲ್ಲಿ ಇರುತ್ತದೆ. ದೃಢ ಮನಸ್ಸಿನ ವ್ಯಕ್ತಿಯು ನೈತಿಕತೆಯನ್ನು ಸೃಷ್ಟಿ ಮಾಡುತ್ತಾನೆ. ಅದರ ಗಡಿಗೆರೆಗಳನ್ನು ಹಾಕುತ್ತಾನೆ. ದುರ್ಬಲನು ಅದಕ್ಕೆ ಪ್ರತಿಕ್ರಿಯಿಸುತ್ತಾನೆ. ಆದ್ದರಿಂದ ಒಡೆಯನು ಶ್ರೇಷ್ಠನೂ, ಉದಾತ್ತನೂ ಆಗಿರಬೇಕಾಗುತ್ತದೆ. ಒಡೆಯನ ನೈತಿಕತೆ ಒಂದು ಮನೋಭಾವನೆಯಾದರೆ ಸೇವಕನ ನೈತಿಕತೆ ಮರುಮನೋಭಾವನೆ (**re sentiment**). ಅಂದರೆ ಒಡೆಯನು ತನ್ನ ಭಾವನೆಗಳಿಗೆ ತಕ್ಕಂತೆ ಹಾಕಿಕೊಂಡ ನೈತಿಕ ನೆಲೆಗಟ್ಟಿಗೆ ಸೇವಕನು ತನ್ನ ಭಾವನೆಗಳನ್ನು ಹೊಂದಿಸಿಕೊಳ್ಳುತ್ತಾನೆ. ಸೇವಕನ ನೈತಿಕತೆಗೆ ಸ್ವಂತಿಕೆ ಇಲ್ಲ. ಆದ್ದರಿಂದ ಅದು ದುರ್ಬಲನಲ್ಲೇ ಉತ್ಪತ್ತಿಯಾಗುತ್ತದೆ. ಸೇವಕ ನೈತಿಕತೆ ಒಡೆಯನ ದಬ್ಬಾಳಿಕೆಗೆ ನೀಡುವ ಪ್ರತಿಕ್ರಿಯೆ. ಅದು ತಿರಸ್ಕಾರದಿಂದಲೇ ಹುಟ್ಟುತ್ತದೆ. ಪರಿಣಾಮ; ಸೇವಕರಲ್ಲಿ ನೈರಾಶ್ಯ ಭಾವನೆ, ಸಿನಿಕತನ ಸಹಜವಾಗಿರುತ್ತದೆ. ಒಡೆಯನಿಗೆ ಉಪಯುಕ್ತರಾಗಿರುವುದೇ ಸೇವಕರ ನೈತಿಕತೆ ಎಂಬ ವಾದವನ್ನು ನೀಷೆ ಮಂಡಿಸುತ್ತಾನೆ.

ಸಮುದಾಯಕ್ಕೆ ಉಪಕಾರಿಯಾಗಿರುವುದು ಒಳ್ಳೆಯತನ, ಬಲಿಷ್ಠರಿಗೆ ಉಪಕಾರಿಯಾಗಿರುವುದು ಒಳ್ಳೆಯತನವಲ್ಲ. ಸತ್ವಶಾಲಿಗಳು ಸಂಖ್ಯೆಯಲ್ಲಿ ಕಡಿಮೆಯಿರುವುದರಿಂದ ದುರ್ಬಲರು ಅವರನ್ನು ಭ್ರಷ್ಟಗೊಳಿಸುತ್ತಾರೆ. ಅಂದರೆ ಸೇವಕರು ಒಡೆಯರನ್ನು ದುರ್ಬಲಗೊಳಿಸುತ್ತಾರೆ. ದೈನ್ಯತೆ, ಮೃದುತ್ವಗಳು ವ್ಯಕ್ತಿಗೆ ತಂತಾನೆ ಬರುವುದಿಲ್ಲ. ಅವು ಒಡೆಯನ ಸಂಪರ್ಕದಿಂದ ಒತ್ತಾಯಪೂರ್ವಕವಾಗಿ ಹೇರಲ್ಪಟ್ಟವು. ಬೈಬಲಿನಲ್ಲಿ ಹೇಳಿರುವಂತೆ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನು ತೋರುವುದು ದೈನ್ಯತೆ. ಅದು ದೌರ್ಬಲ್ಯದ ಸಂಕೇತವೂ ಆಗುತ್ತದೆ. ಆದ್ದರಿಂದ ಬೈಬಲಿನ ತತ್ವಗಳಾದ ದೈನ್ಯತೆ, ದಾನ, ಅನುಕಂಪ, ಸೇವೆ ಎಲ್ಲವೂ ಸೇವಕ ನೈತಿಕತೆಯೆ. ಅದನ್ನು ಕ್ರೈಸ್ತ ಧರ್ಮ ಸಾರ್ವತ್ರೀಕರಣಗೊಳಿಸಿದೆ ಮತ್ತು ಒಡೆಯರನ್ನೂ ಸೇವಕರನ್ನಾಗಿಸಿದೆ. ಪ್ರಜಾಪ್ರಭುತ್ವ ಚಳವಳಿಯು ಕ್ರೈಸ್ತ ಧರ್ಮದ ಮುಂದುವರಿಕೆಯಾಗಿದೆ. ಸ್ವಾತಂತ್ರ್ಯ ಮತ್ತು ಸಮಾನತೆಗೆ ಜೋತುಕೊಂಡವರಿಗೆ ಇದು ರಾಜಕೀಯ ಪ್ರಣಾಳಿಕೆಯು ಆಗುತ್ತದೆ. ಒಡೆಯ ಮತ್ತು ಸೇವಕ ನೈತಿಕತೆಗಳ ನಡುವಿನ ಗುದ್ದಾಟ ಇಂದು ನೆನ್ನೆಯದಲ್ಲ. ಗ್ರೀಕ್ ಮತ್ತು ರೋಮನ್ ಸಾಮ್ರಾಜ್ಯಗಳಾದ್ಯಂತ ಕ್ರೈಸ್ತ ಧರ್ಮ ಆವರಿಸಿಕೊಳ್ಳುವುದರೊಂದಿಗೆ ಸೇವಕ ನೈತಿಕತೆ ಒಡೆಯ ನೈತಿಕತೆಯನ್ನು ಸೋಲಿಸಿತು ಎಂಬುದು ನೀಷೆಯ ವಾದ.

ಈ ಅಭಿಪ್ರಾಯವನ್ನು ಅನೇಕರು ಒಪ್ಪುವುದಿಲ್ಲ. ಸ್ವತಃ ಡಾ. ಬಿ.ಆರ್.ಅಂಬೇಡ್ಕರ್ ನೀಷೆಯನ್ನು ಮನುವಿಗೆ ಹೋಲಿಸಿದ್ದಾರೆ. ನೀಷೆ ತನ್ನ ಕಾಲದಲ್ಲಿ ಬಲಪಂಥೀಯನೆಂದೇ ಹೆಸರುವಾಸಿಯಾಗಿದ್ದ. ತಾನು ಶ್ರೀಮಂತರ ಮತ್ತು ಪಾಳೆಯಗಾರರ ತತ್ವಜ್ಞಾನಿ ಎಂದು ಅವನೇ ಹೇಳಿಕೊಂಡಿದ್ದಾನೆ. ನಾಜೀವಾದ ಮತ್ತು ಸರ್ವಾಧಿಕಾರದ ಹುಟ್ಟಿಗೆ ಅವನೇ ಕಾರಣ ಎಂಬ ಆರೋಪವು ಇದೆ. ದಯೆ, ಕರುಣೆ, ಅನುಕಂಪ, ದೈನ್ಯತೆ ಇವುಗಳನ್ನು ದುರ್ಬಲರ ಗುಣಗಳು ಎಂದು ತಿಳಿದಿರುವ ಇವನ ವಾದವನ್ನು ಒಪ್ಪಿಕೊಳ್ಳಲು ಕಷ್ಟವಾಗುತ್ತದೆ. ಒಡೆಯನು ಸೇವಕನಿಗೆ ದಯಾಮಯನಾಗಿರುವುದು ಮತ್ತು ಸೇವಕನು ಒಡೆಯನಿಗೆ ವಿಧೇಯನಾಗಿರುವುದು ಊಳಿಗಮಾನ್ಯ ಸಮಾಜದಲ್ಲಿ ಸಹಜವಾಗಿರುವಂತೆ ತೋರುತ್ತದೆ. ಆದರೆ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಬಯಸುವ ಸಮಾಜದಲ್ಲಿ ಇದು ಪ್ರಸ್ತುತವೆನಿಸುವುದಿಲ್ಲ. ಸೇವೆಯನ್ನು ಒಂದು ವ್ಯವಹಾರವನ್ನಾಗಿ ನೋಡುವ ಪಾಶ್ಚಾತ್ಯರಲ್ಲಿ ಈ ನಂಬಿಕೆ ಇಲ್ಲವೆನ್ನುವಷ್ಟು ಸಡಿಲವಾಗಿದೆ. ಗಾಂಧಿ ತಮ್ಮ ಹಿಂದ್ ಸ್ವರಾಜ್ ಪುಸ್ತಕದಲ್ಲಿ ಮಾಲೀಕನು ತನ್ನ ಕಾರ್ಮಿಕರು ಊಟಮಾಡಿದ ನಂತರ ತಾನು ಊಟ ಮಾಡಬೇಕು ಎಂಬ ಆದರ್ಶದ ಮಾತನ್ನು ಹೇಳುತ್ತಾರೆ. ಸಬಲರು ಮತ್ತು ದುರ್ಬಲರು ಒಟ್ಟಿಗೆ ಇರುವ ಅನಿವಾರ್ಯ ಸಂದರ್ಭದಲ್ಲಿ ಪರಸ್ಪರ ಸ್ನೇಹ, ವಿಶ್ವಾಸಗಳೆ ಮುಖ್ಯವಾಗುತ್ತವೆ.

■ ಮೂಚಿ

## ಮಾತೇ ಮುತ್ತು

★ ಮೂರ್ಖರು ಖಚಿತವಾಗಿ ಹೇಳುತ್ತಾರೆ; ಬುದ್ಧಿವಂತರಿಗೆ ಗೊಂದಲ ಇರುತ್ತದೆ. ಅದೇ ಜಗತ್ತಿನ ದೊಡ್ಡ ಸಮಸ್ಯೆ.

—ಬರ್ಟ್ರೆಂಡ್ ರಸೆಲ್

★ ರಕ್ತವಿಲ್ಲದೆ ದೇಹ ಇರಲು ಸಾಧ್ಯವಿಲ್ಲ. ಹಾಗೆಯೇ ಶ್ರದ್ಧೆ ಮತ್ತು ಪ್ರಾರ್ಥನೆಗಳು ಇಲ್ಲದೆ ಆತ್ಮ ಬದುಕಲು ಸಾಧ್ಯವಿಲ್ಲ.

—ಮಹಾತ್ಮ ಗಾಂಧಿ

★ ಕೈಯಿಂದ ಕೆಲಸವಾಗಲಿ, ಹೃದಯದಲ್ಲಿ ಭಕ್ತಿ ಇರಲಿ.

—ವಿನೋಬಾ ಭಾವೆ

★ ನಿದ್ದೆಯಲ್ಲಿ ಕಾಣುವುದು ಕನಸಲ್ಲ; ನಿದ್ದೆಗೆಡುವಂತೆ ಮಾಡುವುದು ನಿಜವಾದ ಕನಸು.

—ಎ.ಪಿ.ಜೆ.ಅಬ್ದುಲ್ ಕಲಾಂ

★ ಗೆಳೆಯರನ್ನು ಆಯ್ಕೆ ಮಾಡಿಕೊಳ್ಳುವುದು ಕ್ಷಣದ ಕೆಲಸ. ಆದರೆ ಗೆಳೆತನ ನಿಧಾನಕ್ಕೆ ಫಲ ಬಿಡುವ ಮರ.

—ಅರಿಸ್ಟಾಟಲ್

★ ಅಧಿಕಾರದಲ್ಲಿ ಏನೂ ಇಲ್ಲ. ಅದನ್ನು ಹೇಗೆ ಬಳಸುತ್ತೇವೆ ಎನ್ನುವುದರ ಮೇಲೆ ಯಶಸ್ಸು ಅವಲಂಬಿಸಿದೆ.

—ಐಸಾಕ್ ನ್ಯೂಟನ್

★ ಯಾರಿಗೆ ತಾವು ಇರುವಲ್ಲಿ ಸಂತೋಷ, ಕುತೂಹಲಗಳು ಇರುವುದಿಲ್ಲವೋ ಅವರು ಅದನ್ನು ಹುಡುಕಿಕೊಂಡು ಬೇರೆಲ್ಲಿಗೋ ಹೋಗುವುದು ವ್ಯರ್ಥ.

—ಪೂರ್ಣಚಂದ್ರ ತೇಜಸ್ವಿ

★ ಅಜ್ಞಾನ ಎಂದೂ ಯಾವ ಪ್ರಶ್ನೆಯನ್ನೂ ಬಗೆಹರಿಸುವುದಿಲ್ಲ.

—ಬೆಂಜಮಿನ್ ಡಿಸ್ರೇಲಿ

★ ಹೇಳಿದಂತೆ ನಡೆಯುವವನ ಮಾತುಗಳು ಸ್ವೀಕರಿಸಲು ಯೋಗ್ಯವಾದದ್ದು.

—ಧಮ್ಮಪದ

★ ಅತೃಪ್ತ ಗ್ರಾಹಕರೇ ನಿಮ್ಮ ಕಲಿಕೆಯ ಅತಿದೊಡ್ಡ ಮೂಲ.

—ಬಿಲ್ ಗೇಟ್ಸ್

★ ಯಶಸ್ಸಿಗೆ ಆತ್ಮವಿಶ್ವಾಸ ಮುಖ್ಯ; ಆತ್ಮವಿಶ್ವಾಸಕ್ಕೆ ಸಿದ್ಧತೆ ಮುಖ್ಯ.

—ಆರ್ಥರ್ ಆ್ಯಶ್